ಸ್ಪೆಷಲ್ ಕೇಸ್ ನಂ. 362/2018

ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 03.08.2023

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

1. ನಾಲ್ಕು ಜನ ಗಂಡ ಒಂದು ಹೆಣ್ಣುಮಗಳು ಇದ್ದಾಳೆ. ನಾನು ಹಲವಾರು ವರ್ಷದಿಂದ ಮಹಿಳಾ ಸಮಾಜದ ಹಿಂಭಾಗ ಇರುವ ಮನೆಯಲ್ಲಿ ವಾಸವಿದ್ದೇನೆ ಎಂದರೆ ಸರಿ. ಹಳೆ ಮನೆ ಕೆಡವಿಕೊಂಡು ಆರ್ ಸಿ ಸಿ ಮನೆ ಕಟ್ಟಿಕೊಂಡು ವಾಸವಿದ್ದೇವೆ. ನಮ್ಮ ಮನೆಯ ಮುಂದೆ ಶಂಕರಯ್ಯ ರವರಿಗೆ 2001-02 ನೇ ಸಾಲಿನಲ್ಲಿ ಜಾಗ ಮಂಜೂರು ಮಾಡಿದ್ದರು ಎಂದರೆ ಸರಿ. ನಂತರ ಅಲ್ಲಿ ಶಂಕರಯ್ಯ ಅರ್ಧದವರೆಗೆ ಮನೆ ನಿರ್ಮಾಣ ಮಾಡಿದ್ದ. ಈ ಸಂಬಂಧ ಸರ್ಕಾರದಿಂದ ಹಣ ಬಿಡುಗಡೆ ಆಗಿತ್ತು. ಈ ಸಂದರ್ಭದಲ್ಲಿ ಶಂಕರಯ್ಯ ಪಕ್ಕದ ಚಾಮನಹಳ್ಳಿಯಲ್ಲಿ ವಾಸ ಇದ್ದರಿಂದ ಹಣ ಬಿಡುಗಡೆ ಆದದ್ದನ್ನು ಸರ್ಕಾರದವರು ವಾಪಸ್ ಪಡೆದುಕೊಂಡಿದ್ದರು. ಪಕ್ಕದ ಹಳ್ಳಿಗೆ ಹೋಗಿ ಸೇರಿಕೊಂಡಿದ್ದರಿಂದ ಆ ಮನೆ ಅರ್ಧಕ್ಕೆ ಉಳಿದಿತ್ತು ಎಂದರೆ ಸರಿ. ಪಕ್ಕದ ಊರಿಗೆ ಸೇರಿಕೊಂಡಿದ್ದರಿಂದ ಹಿಂದೆ ಆ ಸ್ವತ್ತನ್ನು ಪಂಚಾಯಿತಿಯವರು ವಶಕ್ಕೆ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಅರ್ಧಕ್ಕೆ ಬಿಟ್ಟಿದ್ದ ಮನೆಯನ್ನು ಪಂಚಾಯಿತಿಗೆ ನಾನಾಗಲೀ, ಚಾಸಾ.1 ರವರು ಪಂಚಾಯಿತಿಯವರಿಗೆ ಅದನ್ನು ನಮಗೆ ಮಂಜೂರು ಮಾಡಿಕೊಡಿ ಎಂದು ಅರ್ಜಿ ಕೊಟಿರಲಿಲ್ಲ ಎಂದರೆ ಸರಿಯಲ್ಲ. ನಾವು ಅರ್ಜಿ ಕೊಟ್ಟ ನಂತರ ಪಂಚಾಯಿತಿಯವರು ಇನ್ನೂ ನಮಗೆ ಮಂಜೂರು ಮಾಡಿಕೊಟ್ಟಿರಲಿಲ್ಲ ಎಂದರೆ ಸರಿ. ಈ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ನನಗೆ ಆಗಲೇ ಮನೆ ಇತ್ತು ಎಂದರೆ ಸರಿ ಮುಂದುವರೆದು ಆ ಆಸ್ತಿಯಲ್ಲೂ ಕೂಡ ನಾವು ವಾಸವಿದ್ದೆವು. ನನಗೆ ಆಗಲೇ ಒಂದು ಮನೆ ಇದ್ದು ಮತ್ತೊಂದು ಪಂಚಾಯಿತಿಯವರು ಕೊಡಲು ಆಗುವುದಿಲ್ಲ ಎಂದು ನಮಗೆ ಮಂಜೂರು ಮಾಡಿರಲಿಲ್ಲ ಎಂದರೆ ಸರಿ. ನನ್ನ ಮನೆಯ ಮುಂದೆ ಆಸ್ತಿ ನಂ.1025 ಇದ್ದರಿಂದ ಅಲ್ಲಿ ನಾವು ದನ ಕರುಗಳು, ಆಟೋ ಇವುಗಳನ್ನು ನಿಲ್ಲಿಸುತ್ತೇವೆಂದರೆ ಸರಿಯಲ್ಲ.

ಪಂಚಾಯಿತಿಯವರು ಆಸ್ತಿಯನ್ನು ಸವಿತಾ ಸಮಾಜದವರಿಗೆ ಕೊಡಬೇಕು ಎಂದು ಪಂಚಾಯಿತಿಯಲ್ಲಿ ತೀರ್ಮಾನ ಆಗಿತ್ತು ಎಂದರೆ ಸರಿ. ಈ ರೀತಿ ತೀರ್ಮಾನ ಆದ ಮೇಲೆ ಸ್ಥಳಕ್ಕೆ ಪಂಚಾಯಿತಿಯವರು, ಪೊಲೀಸರು ಬಂದಿದ್ದರು ಎಂದರೆ ಹೊಡೆದಾಟ ಆದ ಮೇಲೆ ಬಂದಿದ್ದರು. ಆ ಸ್ವತ್ತು ನನಗಾಗಲೀ, ಚಾಸಾ.1 ರವರ ಹೆಸರಿನಲ್ಲಿದ್ದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರಲಿಲ್ಲ ಎಂದರೆ ಸರಿ. ಅದೇ ರೀತಿ ಪಂಚಾಯಿತಿಯವರು ಸ್ವತ್ತು ಪಂಚಾಯಿತಿಗೆ ಸೇರಿದ್ದು ಅದನ್ನು ಖಾಲಿ ಮಾಡಿಕೊಡಿ ಎಂದು ನೋಟಿಸು ಕೊಟ್ಟಿದ್ದರು ಎಂದರೆ ಸರಿ. ನೋಟಿಸನ್ನು ನಾವು ಹಾಗೂ ನಮ್ಮ ಮನೆಯವರು ತಿರಸ್ಕರಿಸಿರುತ್ತೇವೆ ಎಂದರೆ ಸರಿಯಲ್ಲ.

2. ಈ ವಿಚಾರದಲ್ಲಿ ಆರೋಪಿ ನಾರಾಯಣ ನನ್ನ ಹೆಂಡತಿ ವಿರುದ್ಧ ಸದರಿ ಆಸ್ತಿ ಅವರಿಗೆ ಸೇರಬೇಕೆಂದು ಓ ಎಸ್ 86/2002 ನ್ನು ಹಾಕಿದ್ದರು ಎಂದರೆ ಸರಿ. ಆ ಕೇಸಿನಲ್ಲಿ ನಾನು ವಕೀಲರನ್ನು ನೇಮಕ ಮಾಡಿಕೊಂಡಿದ್ದು, ದಾವೆ ತೀರ್ಮಾನವಾಗಿ ಸದರಿ ಆಸ್ತಿ ಪಂಚಾಯಿತಿಗೆ ಸೇರಿದ್ದು ಎಂದು ತೀರ್ಮಾನ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಶಂಕರಯ್ಯ ಆಸ್ತಿಯನ್ನು ಖಾಲಿ ಮಾಡಿದ ನಂತರ ಅದನ್ನು ನಮ್ಮ ವಶಕ್ಕೆ ಪಡೆದುಕೊಂಡಿದ್ದೇವೆ ಎಂದರೆ ಸರಿ. ಸದರಿ ಆಸ್ತಿಗೆ ಸಂಬಂಧಪಟ್ಟಂತೆ ನಮ್ಮ ಕುಟುಂಬ ಹಾಗೂ ಆರೋಪಿತರ ನಡುವೆ ವ್ಯಾಜ್ಯ ಇದೆ ಎಂದರೆ ಸರಿ. ಸದರಿ ಜಾಗವನ್ನು ತೆರವುಗೊಳಿಸಲು ನನಗೆ ಪಂಚಾಯಿತಿಯಿಂದ ಹಲವಾರು ಬಾರಿ ಕೇಳಿ ನೋಟಿಸು ಕೊಟ್ಟಿದ್ದು ಅದನ್ನು ನಮ್ಮ ಕುಟುಂಬದವರು ತಿರಸ್ಕರಿಸುತ್ತೇವೆ ಎಂದರೆ ಸರಿಯಲ್ಲ. ನೋಟಿಸನ್ನು ನಾನು ತಿರಸ್ಕರಿಸಿದ್ದರಿಂದ ಆಸ್ತಿಯಲ್ಲಿ ನೋಟಿಸು ಅಂಟಿಸಿದ್ದರು ಎಂದರೆ ಸರಿಯಲ್ಲ. ಆಸ್ತಿಯನ್ನು ಸವಿತಾ ಸಮಾಜದವರಿಗೆ ಕೊಡುತ್ತಿದ್ದಾರೆಂದು ಗೊತ್ತಾದ ನಂತರ ಆಸ್ತಿಯನ್ನು ಅವರಿಗೆ ಕೊಡಬೇಡಿ ಎಂದು ನಾವು ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿಯಲ್ಲ. ಪಂಚಾಯಿತಿಯಮರು ಮಾಡಿರುವ ತೀರ್ಮಾನವನ್ನು ಹೇಗಾದರೂ ಮಾಡಿ ತಡೆಯುವ ಸಂಬಂಧ ಹಾಗೂ ಅಸ್ತಿಯನ್ನು ಉಳಿಸಿಕೊಳ್ಳುವ ಸಲುವಾಗಿ ನನ್ನ ಮಗನ ಮುಖಾಂತರ ಸುಳ್ಳು ದೂರನ್ನು ಕೊಟ್ಟಿರುತ್ತೇವೆಂದರೆ ಸರಿಯಲ್ಲ.

3. ಮನೆಯನ್ನು ಖಾಲಿ ಮಾಡಿಸುವ ಸಲುವಾಗಿ ಪಂಚಾಯಿತಿಯವರು ಮನೆ ಹತ್ತಿರ ಬರುತ್ತಾರೆಂಬ ವಿಷಯ ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ಈ ಸಂಬಂಧ ಅಧಿಕಾರಿಗಳು ನಮ್ಮ ಮನೆಗೆ ಬಂದಾಗ ಪೊಲೀಸರು ಬಂದಿದ್ದರು ಎಂದರೆ ಹೊಡೆದಾಟ ಆದಾಗ ಪೊಲೀಸರು ಬಂದಿದ್ದರು. ದೂರು ಕೊಡುವ ಪೂರ್ವದಲ್ಲಿ ಪೊಲೀಸರು ಸ್ಥಳಕ್ಕೆ ಬಂದಿದ್ದರು ಎಂದರೆ ಸರಿ. ಆಗ ಪಂಚಾಯಿತಿಯವರು ಹಾಗೂ ಗ್ರಾಮಸ್ಥರು ಸ್ಥಳದಲ್ಲಿ ಸೇರಿದ್ದರು ಎಂದರೆ ಸರಿ. ಆಗ ನಮ್ಮ ಕುಟುಂಬದವರು ಆಸ್ತಿ ನಮಗೆ ಸೇರಿದ್ದು ಎಂದು ಯಾವುದೆ ದಾಖಲೆ ಕೊಟ್ಟಿರಲಿಲ್ಲ ಎಂದರೆ ಸರಿ. ನಮಗೆ ಇನ್ನೂ ದಾಖಲೆ ಬಂದಿಲ್ಲ. ಅಧಿಕಾರಿಗಳು ಸ್ಥಳಕ್ಕೆ ಬಂದಾಗ ಆಸ್ತಿ ನಮಗೆ ಸೇರಿದ್ದು ಎಂದು ನಾವು ತಡೆ ಒಡ್ಡಿದ್ದೆವು ಎಂದರೆ ಸರಿ. ಆಗ ಪಂಚಾಯಿತಿ ಅಧಿಕಾರಿಗಳು ನನ್ನ ಹಾಗೂ ಚಾಸಾ.1 ರವರ ವಿರುದ್ಧ ದೂರು ಕೊಟ್ಟಿದ್ದರು ಎಂದರೆ ಸರಿ. ಸದರಿ ದೂರು ದಾಖಲಾದ ನಂತರ ನಮ್ಮ ಮೇಲೆ ಆರೋಪಿತರು ದೂರು ಕೊಟ್ಟಿರುವ ವಿಷಯ ನನಗೆ ಗೊತ್ತು ಎಂದರೆ ಸರಿ. ನಂತರ ನನ್ನ ಮಗನ ಮುಖಾಂತರ ಜಾತಿ ನಿಂದನೆ ಕೇಸು ದಾಖಲಿಸಿದ್ದೇವೆ ಎಂದರೆ ಸರಿ. ಆಸ್ತಿ ನನ್ನದ್ದಲ್ಲ ಪಂಚಾಯಿತಿಗೆ ಸೇರಿದ್ದು ಎಂಬ ವಿಷಯ ತಿಳಿದಿದ್ದರೂ ಕೂಡ ಯಾವುದೇ ಘಟನೆ ನಡೆಯದೇ ಇದ್ದರೂ ಆಸ್ತಿಯನ್ನು ಲಪಟಾಯಿಸಿಕೊಳ್ಳುವ ದೃಷ್ಟಿಯಿಂದ ಚಾಸಾ.1 ರವರ ಮುಖಾಂತರ ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಾವು ದೂರು ಕೊಟ್ಟ ನಂತರ ಸಾವಿರಾರು ಜನರು ಜಿಲ್ಲಾಧಿಕಾರಿ ಕಛೇರಿಗೆ ಬಂದು ಪ್ರತಿಭಟನೆ ಮಾಡಿದ್ದರು ಎಂದರೆ ಸರಿ. ಈ ವಿಚಾರದಲ್ಲಿ ಪೊಲೀಸರು ಬಂದೊಬಸ್ತ್ ಗಾಗಿ ನಮ್ಮ ಗ್ರಾಮದಲ್ಲಿ ಇದ್ದರು ಎಂದರೆ ಸರಿ. ಈಗಲೂ ಕೂಡ ಸ್ವತ್ತಿಗೆ ಸಂಬಂಧಪಟ್ಟಂತೆ ನಮ್ಮ ಕುಟುಂದವರ ಯಾರ ಹೆಸರಿಗೂ ದಾಖಲೆ ಇಲ್ಲ ಎಂದರೆ ಸರಿ.

5. ಆ ಜಾಗವನ್ನು ಹೇಗಾದರೂ ಮಾಡಿ ಲಪಟಾಯಿಸಿಕೊಂಡು ಅದನ್ನು ಉಳಿಸಿಕೊಳ್ಳುವ ಸಲುವಾಗಿ ಸುಳ್ಳು ದೂರು ಕೊಟ್ಟಿದ್ದೇನೆಂದರೆ ಸರಿಯಲ್ಲ. ಆರೋಪಿತರು ನನಗಾಗಲೀ, ನನ್ನ ಮಗನಿಗೆ ಆಗಲೀ ಹಲ್ಲೆ ಮಾಡಿ, ಅವ್ಯಾಚ ಶಬ್ಧದಿಂದ ಬೈದು ಜಾತಿ ನಿಂದನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

6. ನನ್ನ ಮುಖ್ಯ ವಿಚಾರಣೆಯ ಕಂಡಿಕೆ 3 ರಲ್ಲಿ ತಿಳಿಸಿರುವ ಹಾಗೇ "1 ನೇ ಆರೋಪಿ ನನ್ನ ಕತ್ತಿನ ಪಟ್ಟಿ ಹಿಡಿದು ಎಳೆದಾಡಿ ನನ್ನನ್ನು ಮನೆಯಿಂದ ಆಚೆ ಎಳೆದುಕೊಂಡು ಬಂದು 2 ನೇ ಆರೋಪಿ ನನ್ನ ಮಗನನ್ನು ಹಿಡಿದು ಹೊಡೆದ. 3 ನೇ ಆರೋಪಿ ಕೈಗಳಿಂದ ನನ್ನ ಕಪಾಳಕ್ಕೆ ಹೊಡೆದು, ಚಪ್ಪಲಿ ಕಾಲಿನಿಂದ ನನಗೆ ಒದ್ದನು. ಹೊಲೆಯ ಮಾದಿಗ, ಶೇವಿಂಗ್ ಮಾಡಿಸುತ್ತೇನೆ ಎಂದು ಹೇಳುತ್ತೀಯಾ, ಎಷ್ಟು ಧೈರ್ಯ ಎಂದು ಅವಾಚ್ಯ ಶಬ್ದದಿಂದ ಬೈದು ಜಾತಿ ನಿಂದನೆ ಮಾಡಿದರು. ನಂತರ ಚಾಸಾ 1 ಘಟನೆ ಕುರಿತು ಪೊಲೀಸರಿಗೆ ಫೋನ್ ಮಾಡಿದ. ಪೊಲೀಸರು ಸ್ಥಳಕ್ಕೆ ಬಂದು ಆಚೆ ಹಾಕಿದ ಸಾಮಾನುಗಳನ್ನು ಒಳಗೆ ಇರಿಸಲು ಸಹಕರಿಸಿದರು. ಶೇವಿಂಗ್ ಮಾಡಿ ಎಂದು ಕೇಳಿದ್ದಕ್ಕೆ ಆರೋಪಿತರು ನನಗೆ ಜಾತಿ ಹಿಡಿದು ನಿಂದನೆ ಮಾಡಿದ್ದರು" ಎಂದು ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿ. ಸೇವಿಂಗ್ ಮಾಡಿ ಎಂದು ಕೇಳಿದ್ದಕ್ಕೆ ನನಗೆ ಆರೋಪಿತರು ಜಾತಿ ಹಿಡಿದು ನಿಂದನೆ ಮಾಡಿದದ್ದಿರು ಎಂದು ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಈ ವಿಷಯ ನಾನು ಹೇಳದೇ ಇದ್ದರೂ ಚಾಸಾ.1 ರವರ ಮಾತುಕೇಳಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಘಟನೆಗೆ ಸಂಬಂಧಪಟ್ಟಂತೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

(ಮರು ವಿಚಾರಣೆಃ ಇಲ್ಲ.)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ.ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.